# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 409
ಸದಸ್ಯರ ಹೆಸರು : ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 13.08.2025

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲ್ಲೂಕಿನ ಮೊಳೆಯೂರು ಗ್ರಾಮ ಮತ್ತು ಸುತ್ತಮುತ್ತಲಿನ ಕಾಡಂಚಿನ 6 ವನವಾಸಿ ಗ್ರಾಮಗಳಾದ ಕಾವಲ್, ಕಬ್ಬೆಪುರ ಎ, ಕಬ್ಬೆಪುರ ಬಿ ಹಾಡಿ, ಕಾಂತನಹಾಡಿ, ಹಿರೇಹಳ್ಳಿ, ಈ ಗ್ರಾಮಗಳ ಜನರಿಗೆ ಮತ್ತು ಶಾಲಾ ಕಾಲೇಜಿನ ಮಕ್ಕಳಿಗೆ ಅನುಕೂಲಕರವಾಗುವ ಬಸ್ ರೂಟ್ ನಂ.31, 32 ಮತ್ತು 63 ಸುಮಾರು 30 ವರ್ಷಗಳಿಂದ ಓಡಾಡುವ ಬಸ್ಸನ್ನು ಸ್ಥಗಿತಗೊಳಿಸಲು ಕಾರಣವೇನು;</td><td rowspan="2">ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯ ಹೆಚ್.ಡಿ. ಕೋಟೆ ತಾಲ್ಲೂಕಿನ ಮೊಳೆಯೂರು ಗ್ರಾಮದ ಮೂಲಕ ಆಚರಣೆಯಾಗುತ್ತಿರುವ ಅನುಸೂಚಿ ಸಂಖ್ಯೆ:31/32 ಮತ್ತು 63 ಮಾರ್ಗಗಳನ್ನು ಕಡಿತಗೊಳಿಸಿರುವುದಿಲ್ಲ. ಸದರಿ ಮಾರ್ಗಗಳನ್ನು ಹೆಚ್.ಡಿ.ಕೋಟೆ ಘಟಕದಿಂದ ಕಾರ್ಯಾಚರಣೆ ಗೊಳಿಸಲಾಗುತ್ತಿದೆ.<br>ಸದರಿ ಅನುಸೂಚಿಗಳ ನಿರ್ಗಮನದ ಸಮಯ ಈ ಕೆಳಗಿನಂತಿದೆ.<br><table><tr><td>ಸರಗೂರು ಬಿಡುವ ಸಮಯ</td><td>07:05, 07:15, 09:20, 12:00, 13:45, 15:15, 15:30, 17:00, 19:50</td></tr><tr><td>ಮೊಳೆಯೂರು ಬಿಡುವ ಸಮಯ</td><td>06:30, 08:00, 10:40, 12:45, 14:30, 16:15, 16:20, 18:00</td></tr></table><br>ಪ್ರಸ್ತುತ ಸಾರ್ವಜನಿಕ ಪ್ರಯಾಣಿಕರ ಬೇಡಿಕೆ / ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸದರಿ ಸಾರಿಗೆಗಳ ಸದುಪಯೋಗವನ್ನು ಪಡೆದು ಕೊಳ್ಳುತ್ತಿದ್ದಾರೆ.</td></tr>
<tr><td>ಆ)</td><td>ಪ್ರತಿನಿತ್ಯ ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ತಲುಪಲು ಸಾಧ್ಯವಾಗದೆ ಸಮಸ್ಯೆಗಳನ್ನು ಎದುರಿಸುತ್ತಿರುವುದಕ್ಕೆ ಸ್ಥಗಿತಗೊಳಿಸಲಾದ ಬಸ್ಸನ್ನು ಪುನಃ ಪ್ರಾರಂಭಿಸಲು ಕ್ರಮವಹಿಸ ಲಾಗುವುದೇ? (ಮಾಹಿತಿ ನೀಡುವುದು)</td></tr>
</table>

ಸಂಖ್ಯೆ: ಟಿಡಿ 145 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು